5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

**ಎಸ್.ಸಿ. ಸಂಃ10001/2022**

ಪಿಡಬ್ಲ್ಯೂ- 02
ಸಿಡಬ್ಲ್ಯೂ-03

| | | |
|---|---|---|
| ಸಾಕ್ಷಿ ಹೆಸರು | - | ನಾಗೇಂದ್ರ |
| ತಂದೆ ಹೆಸರು | - | ಶಿವರಾಮ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಪಾನಿಪುರಿ ಅಂಗಡಿ |
| ವಿಳಾಸಃ | - | ರಿಪ್ಪನ್ ಪೇಟೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 05–08–2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಚಾಸಾ -2 ನನಗೆ ಗೊತ್ತು. ಚಾಸಾ-12 , ಪ್ರಾ ಸಾ -1 ನನಗೆ ಗೊತ್ತು, ಪೋಲೀಸರು ಈ ಪ್ರಕರಣದಲ್ಲಿ ಪಂಚನಾಮೆಗೆ ಬರಬೆಕು ಎಂದು ನೋಟೀಸ್ ನ್ನು ಕೊಟ್ಟಿದ್ದರು. ಸಾಕ್ಷಿಯು ಸದರಿ ನೋಟೀಸ್ ನ್ನು ನೋಡಿ ಗುರುತಿಸಿದ್ದುಸದರಿ ನೋಟೀಸ್ ನ್ನು ನಿಪಿ -2 ಎಂದು ಸಾಕ್ಷಿಯಸಹಿಯನ್ನು ನಿಪಿ -2 (ಎ) ಎಂದು ಗುರುತಿಸಲಾಯಿತು. ಪೋಲೀಸರು ನಿಪಿ -2 ನ್ನು ಕೊಟ್ಟು ಘಟನಾ ಸ್ಥಳಕ್ಕೆ ಬರಬೇಕೆಂದು ಕೊಟ್ಟಿದ್ದರು. ಆರೋಪಿಗಳು ಪ್ರಾ ಸಾ -1 ರವರಿಗೆ ಚಾಕುವಿನಿಂದ ಚುಚ್ಚಿದ್ದಾರೆ ಅಲ್ಲಿ ಸ್ದಳ ಪಂಚನಾಮೆ ಮಾಡಬೇಕು ಬನ್ನಿ ಎಂದು ನನಗೆ ತಿಳಿಸಿರುತ್ತಾರೆ. ನಾನು ಬೆಳಿಗ್ಗೆ 10-00 ಗಂಟೆಗೆ ಸ್ಥಳಕ್ಕೆ ಹೋಗಿರುತ್ತೇನೆ. ಗಲಾಟೆಯಾದ ಜಾಗವನ್ನು ಪೋಲೀಸರಿಗೆ ಚಾಸಾ-12 ತೋರಿಸಿರುತ್ತಾರೆ. ಪೋಲೀಸರು ಸ್ದಳವನ್ನು ಪರಿಶೀಲನೆ ಮಾಡಿ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ, ಸ್ದಳದಲ್ಲಿ ನಕ್ಷೆ ತಯಾರಿಸಿರುತ್ತಾರೆ ಮತ್ತು ಫೋಟೋಗಳನ್ನು ತೆಗೆಸಿರುತ್ತಾರೆ. ಸದರಿ ನಕ್ಷೆ ಮತ್ತು ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -3 ಎಂದು ಸಾಕ್ಷಿಯ ಸಹಿಯನ್ನು ನಿಪಿ -3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಕ್ಷೆಯಲ್ಲಿರುವ

ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -4 ಎಂದು ಸಾಕ್ಷಿಯ ಸಹಿಯನ್ನು ನಿಪಿ -4(ಎ) ಎಂದು ಗುರುತಿಸಲಾಯಿತು. ಸದರಿ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -5 ಮತ್ತು ನಿಪಿ -6 ಎಂದು ಗುರುತಿಸಲಾಯಿತು. ನಿಪಿ - 3 ಮತ್ತು 4 ಕ್ಕೆ ನಾನು ಮತ್ತು ಚಾಸಾ-2 ಮತ್ತು ಚಾಸಾ-12 ರವರು ಸಹಿ ಮಾಡಿರುತ್ತೇವೆ.

<u>ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ</u>

ನಿಪಿ -3 ನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಪ್ರಾ ಸಾ -1 ರವರ ಭಾವ . ನಾನು ಸ್ಥಳಕ್ಕೆ ಹೋದಾಗ ಬೇರೆ ಯಾರೂ ಇರಲಿಲ್ಲ, ಪ್ರವೀಣ, ಸುದೀಪ ಮತ್ತು ಪೋಲೀಸರು ಇದ್ದರು. ಪೋಲೀಸರು ಮಹಜರಿಗೆ ಪಕ್ಕದ ಅಂಗಡಿಯವರನ್ನು ಕರೆದಿರಲಿಲ್ಲ. ಮಹಜರ್ ನ್ನು ಪೋಲೀಸರು ಸ್ಥಳದಲ್ಲಿ ಬರೆದಿಲ್ಲ ಪೋಲೀಸ್ ಠಾಣೆಯಲ್ಲಿ ಬರೆದಿದ್ದಾರೆ ಅದಕ್ಕೆ ನಾನುಪೋಲೀಸರ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೇ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2ನೇ ಆರೋಪಿ ಪರ ವಕೀಲರಿಂದಃ</u>

ಪೋಲೀಸರು ಸ್ಥಳದಲ್ಲಿ ಫೋಟೋ ತೆಗೆದಿಲ್ಲ,ಯಾವುದೇ ನಕ್ಷೆ ತಯಾರಿಸಿಲ್ಲ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾ ಸಾ -1 ರವರ ಅಕ್ಕನ ಗಂಡ ಆಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4ನೇ ಆರೋಪಿ ಪರ ವಕೀಲರಿಂದಃ</u>

ಪೋಲೀಸರು ನಾನು ಕೆಲಸ ಮಾಡುವ ಸ್ಥಳದಲ್ಲಿ ನೋಟೀಸನ್ನು ಬೆಳಿಗ್ಗೆ 9 ಗಂಟೆಗೆ ನನಗೆ ನೀಡಿರುತ್ತಾರೆ. ಚಾಸಾ-14 ರವರಿಗೆ ಪೋಲೀಸರು ಎಷ್ಟು ಗಂಟೆಗೆ ನೋಟೀಸ್ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಪೋಲೀಸರು 10 ಗಂಟೆಗೆ ಮಹಜರ್ ಮಾಡುವ ಸ್ಥಳಕ್ಕೆ ಚಾಸಾ-2 ರವಿ ಯ ಮನೆಯ ಎದುರು ಸ್ಥಳಕ್ಕೆ ಬನ್ನಿ ಎಂದು ನೋಟೀಸ್ ನೀಡಿದ್ದರು. ಘಟನೆ ಸ್ಥಳದಿಂದ ಚಾಸಾ-2

ರವರ ಮನೆಗೆ 8-10 ಅಡಿ ದೂರ ಇರುತ್ತದೆ. ಸದರಿ ಸ್ಥಳವನ್ನು ಪೋಲೀಸರು ಟೇಪ್ ತೆಗೆದುಕೊಂಡು ಅಳತೆಯನ್ನು ಮೊದಲೇ ಮಾಡಿದ್ದರು. ನಾನು ಹೋಗುವುದರೊಳಗೆ ಪೋಲೀಸರು ಮಹಜರ್ ಮಾಡಿದ್ದರು. ಸ್ಕೆಚ್ ನಲ್ಲಿದ್ದ ಸ್ಥಳವನ್ನು ಪೋಲೀಸರು ನನ್ನ ಮುಂದೆ ಅಳತೆ ಮಾಡಿಲ್ಲ. ನಿಪಿ -6 ರಲ್ಲಿ ಚಾಸಾ -14 ರವರ ಮನೆ ಕಾಣುತ್ತದೆ. ನಿಪಿ -6 ರಲ್ಲಿ ಚಾಸಾ-14 ರವರ ಅಂಗಡಿ ಮುಂದೆ ಮಹಜರ್ ಮಾಡಿರುತ್ತಾರೆ.

ಪ್ರಾ ಸಾ -1 ರವರು ನನ್ನ ಭಾವ ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಗೆ ಈ ಘಟನೆಗೆ ಸಂಬಂಧಪಟ್ಟಂತೆ 2 ಭಾರಿ ಹೋಗಿರುತ್ತೇನೆ. ಪೋಲೀಸ್ ಠಾಣೆಯಲ್ಲಿ ಪೋಲೀಸರು ಒಂದು ಸಾರಿ ಮಾತ್ರ ನನ್ನ ಸಹಿ ಪಡೆದಿರುತ್ತಾರೆ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ</u>

4 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).